ಶ್ರೀ ಡಿ.ಎನ್. ಜೀವರಾಜ್ : ಆಗ ತಪ್ಪು ಮಾಡಿರುವುದನ್ನು ಈಗ ಸರಿಮಾಡಬೇಕಲ್ಲವೇ?

ಶ್ರೀ ಸಿದ್ದರಾಮಯ್ಯ : ಮಾನ್ಯ ಅಧ್ಯಕ್ಷರೆ, ಇವರು ಮಾಡಿರುವ ತಪ್ಪನ್ನು ನಾವು ಮಾಡುವುದಿಲ್ಲ.

ಅಧ್ಯಕ್ಷರು : ಆಯಿತು. ಡಾ: ಗುರುಪಾದಪ್ಪ ನಾಗಮಾರಪಲ್ಲಿರವರೇ ನಿಮ್ಮ ಪ್ರಶ್ನೆಗೆ ಉತ್ತರ ಬಂದಿಲ್ಲ. ಉತ್ತರ ಕೊಡುವುದಕ್ಕೆ ಸಮಯ ಕೇಳಿದ್ದಾರೆ.

ಡಾ: ಗುರುಪಾದಪ್ಪ ನಾಗಮಾರಪಲ್ಲಿ : ಮಾನ್ಯ ಅಧ್ಯಕ್ಷರೆ, ಉತ್ತರ ಎಂದು ಬರುತ್ತದೆ?

ಅಧ್ಯಕ್ಷರು : ಈ ಸದನದಲ್ಲಿಯೇ ಉತ್ತರ ಕೊಡಿಸುತ್ತೇನೆ.

ಡಾ: ಗುರುಪಾದಪ್ಪ ನಾಗಮಾರಪಲ್ಲಿ : ಈ ವಿಷಯ ಪತ್ರಿಕೆಗಳಲ್ಲಿ ಬಂದಿದೆ. ಈ ಬಗ್ಗೆ ಎಲ್ಲ ಗೊತ್ತಿದ್ದರೂ ಸಹ ಉತ್ತರ ಕೊಡುವುದಕ್ಕೆ ಏನು ತೊಂದರೆ ಇದೆ?

ಶ್ರೀ ಸಿದ್ದರಾಮಯ್ಯ : ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರ ಪ್ರಶ್ನೆಗೆ ಮುಂದಿನ ವಾರ ಈ ಸದನದಲ್ಲಿಯೇ ಉತ್ತರ ಕೊಡುತ್ತೇವೆ.

ಚೆಟ್ಟಿನಾಡ್ ಸಿಮೆಂಟ್ ಕಂಪನಿ

25 (247) ಡಾ: ಉಮೇಶ್ ಜಿ. ಜಾಧವ್ (ಚಿಂಚೋಳಿ) :– ಮಾನ್ಯ ಮುಖ್ಯಮಂತ್ರಿಗಳು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

(ಅ) ಚಿಂಚೋಳಿ ಮತಕ್ಷೇತ್ರದ ವ್ಯಾಪ್ತಿಗೆ ಬರುವ ಚೆಟ್ಟಿನಾಡ್ ಸಿಮೆಂಟ್ ಕಾರ್ಖಾನೆಯು 2008 ರಿಂದ 2014 ರವರೆಗೆ ಹೂಡಿರುವ ಬಂಡವಾಳವೆಷ್ಟು ; (ವಿವರ ನೀಡುವುದು)

(ಆ) 2008 ರಿಂದ 2014 ರವರೆಗೆ ಈ ಕಂಪನಿಯು ಆದಾಯವೆಷ್ಟು; ಕಾರ್ಪೋರೇಟ್ ಸೋಶಿಯಲ್ ರೆಸ್ಪಾನ್ಸಿಬಿಲಿಟಿ (ಸಿ.ಎಸ್.ಆರ್) ಯಡಿಯಲ್ಲಿ ಇಲ್ಲಿಯವರೆಗೆ ಬಂದಿರುವ ಆದಾಯದ ಶೇಕಡ ಎಷ್ಟು ಹಣವನ್ನು ಚಿಂಚೋಳಿ

ತಾಲ್ಲೂಕಿನ ಅಭಿವೃದ್ಧಿ ಕೆಲಸ ಕಾರ್ಯಗಳಿಗೆ ಕಂಪನಿಯು ವಿನಿಯೋಗಿಸಿದೆ (ವಿನಿಯೋಗಿಸಿದ ವಿವರ, ಕ್ರಿಯಾ ಯೋಜನೆಯ ಪ್ರತಿ ಹಾಗೂ ಅನುಷ್ಠಾನಗೊಳಿಸುವ ಯೋಜನೆಗಳ ಪ್ರತಿಗಳನ್ನು ನೀಡುವುದು ?

ಶ್ರೀ ಸಿದ್ದರಾಮಯ್ಯ (ಮಾನ್ಯ ಮುಖ್ಯಮಂತ್ರಿಗಳು) :–

(ಅ) ಚಿಂಚೋಳಿ ಮತ ಕ್ಷೇತ್ರದ ವ್ಯಾಪ್ತಿಗೆ ಬರುವ ಮೆ: ಚೆಟ್ಟಿನಾಡ್ ಸಿಮೆಂಟ್ ಕಾರ್ಖಾನೆಯು 2008 ರಿಂದ 2014 ರವರೆಗೆ ಹೂಡಿರುವ ಬಂಡವಾಳ ರೂ. 737.72 ಕೋಟಿ ವಿವರಗಳು ಕೆಳಕಂಡಂತಿರುತ್ತದೆ.

ಕ್ರ.ಸಂ	ವಿವರಗಳು	ಬಂಡವಾಳ (ರೂ. ಕೋಟಿಗಳಲ್ಲಿ)
1	ಭೂಮಿ	9.18
2	ಕಟ್ಟಡ	12.40
3	ಯಂತ್ರೋಪಕರಣಗಳು	710.25
4	ಇತರೆ ಸ್ಥಿರಾಸ್ತಿಗಳು	5.89
	ಒಟ್ಟು	737.72

(ಆ) 2008 ರಿಂದ 2014 ರವರೆಗೆ ಚೆಟ್ಟಿನಾಡ್ ಸಿಮೆಂಟ್ ಕಾರ್ಖಾನೆಯ ಆದಾಯ ರೂ. 1.552 ಕೋಟಿಗಳು ಆಗಿರುತ್ತದೆ.

ಸದರಿ ಕಂಪನಿಯವರು ಸಿ.ಎಸ್.ಆರ್. ಅಡಿಯಲ್ಲಿ ವಿವಿಧ ಚಟುವಟಿಕೆ ಹಾಗೂ ಕಾಮಗಾರಿಗಳಿಗಾಗಿ ಹಣವನ್ನು ಈ ಕೆಳಕಂಡಂತೆ ಖರ್ಚು ಮಾಡಿರುತ್ತಾರೆ

2012–13ನೇ ಸಾಲಿನ ಖರ್ಚಿನ ವಿವರ ಕೆಳಕಂಡಂತೆ ಇರುತ್ತವೆ.	
(ಅ) ಶಿಕ್ಷಣ	ರೂ. 31.46 ಲಕ್ಷ
(ಬ) ಆರೋಗ್ಯ	ರೂ. 20.02 ಲಕ್ಷ
(ಕ) ಮೂಲಭೂತ ಸೌಕರ್ಯಗಳಿಗಾಗಿ	ರೂ. 66.75 ಲಕ್ಷ
(ಡ) ಅರಣ್ಯೀಕರಣಕ್ಕಾಗಿ	ರೂ. 22.00 ಲಕ್ಷ
ಒಟ್ಟು	**ರೂ. 140.23 ಲಕ್ಷ**

2013–14ನೇ ಸಾಲಿನ ಖರ್ಚಿನ ವಿವರ ಕೆಳಕಂಡಂತೆ ಇರುತ್ತವೆ.	
(ಅ) ಶಿಕ್ಷಣ	ರೂ. 18.68 ಲಕ್ಷ
(ಬ) ಆರೋಗ್ಯ	ರೂ. 11.90 ಲಕ್ಷ
(ಕ) ಮೂಲಭೂತ ಸೌಕರ್ಯಗಳಿಗಾಗಿ	ರೂ. 57.34 ಲಕ್ಷ
(ಡ) ಅರಣ್ಯೀಕರಣಕ್ಕಾಗಿ	ರೂ. 28.14 ಲಕ್ಷ
ಒಟ್ಟು	**ರೂ. 116.06 ಲಕ್ಷ**

ಡಾ ॥ ಉಮೇಶ್ ಜಿ. ಜಾಧವ್ : ಮಾನ್ಯ ಅಧ್ಯಕ್ಷರೆ, ಉತ್ತರವನ್ನು ಒದಗಿಸಿದ್ದಾರೆ. ಆದರೆ, ನಾನು 2008 ರಿಂದ 2014 ರವರೆಗೆ income and expenditure ಗೆ ಮಾಹಿತಿ ಕೇಳಿದ್ದೇನೆ. ಆದರೆ CSR ನಲ್ಲಿ ಕೇವಲ 2 ವರ್ಷದ expenditure ಗೆ ಸಂಬಂಧಪಟ್ಟ ಮಾಹಿತಿಯನ್ನು ಮಾತ್ರ ತೋರಿಸಿದ್ದಾರೆ. 5 ವರ್ಷದ action plan ಬಗ್ಗೆ ಕೂಡ details ಕೊಟ್ಟಿಲ್ಲ. ನಮ್ಮ ಚಿಂಚೋಳಿ ಕ್ಷೇತ್ರದಲ್ಲಿ ಯಾವ development ಕಾಣುತ್ತಿಲ್ಲ. Border area ದಲ್ಲಿ ಏನೂ development ಕಾಣುತ್ತಿಲ್ಲ.

ಅಧ್ಯಕ್ಷರು : ಈಗ ಆಗುತ್ತದೆ. ಈಗ Act ಮಾಡಿದ್ದಾರೆ.

ಶ್ರೀ ಸಿದ್ದರಾಮಯ್ಯ : ಮಾನ್ಯ ಅಧ್ಯಕ್ಷರೆ, ಇವರ ಪ್ರಶ್ನೆ ಏನೆಂದರೆ; ಇವರ ಕ್ಷೇತ್ರದಲ್ಲಿ ಒಂದು ಚೆಟ್ಟಿನಾಡ ಸಿಮೆಂಟ್ ಫ್ಯಾಕ್ಟರಿ ಇದೆ. ಇದಕ್ಕೆ 2008 ರಲ್ಲಿ

ಪರವಾನಗಿಯನ್ನು ಕೊಟ್ಟಿದೆ. 2012 ರಿಂದ ಅವರ production ಕೆಲಸ ಪ್ರಾರಂಭವಾಗಿದೆ. ಈ C.S.R. ಅಡಿಯಲ್ಲಿ Corporate Social responsibility ಎಂಬ ಒಂದು ಕಾಯಿದೆ recent ಆಗಿ ಪಾಸ್ ಆಗಿರುವಂಥದ್ದು. ಅದು 15ನೇ ಏಪ್ರಿಲ್, 2014 ರಿಂದ ಜಾರಿಗೆ ಬಂದಿದೆ. ಅದಕ್ಕೂ ಮೊದಲು compulsory ಆಗಿ ಇರಲಿಲ್ಲ. ಆದರೂ ಕೂಡ ಅವರಿಗೆ Social responsibility ಮಾಡಬೇಕು ಎನ್ನತಕ್ಕಂಥದ್ದು ಅವರಿಗೆ ಇತ್ತು. ಆದರೆ ಕಡ್ಡಾಯ ಇರಲಿಲ್ಲ. ಈಗ 15ನೇ ಏಪ್ರಿಲ್ 2014 ರಿಂದ ಅದು ಕಡ್ಡಾಯವಾಗಿದೆ. ಈ ವರ್ಷದಿಂದ ಅವರ profit ನಲ್ಲಿ 2% ಕೊಡಬೇಕೆಂದು ಇದೆ. ಆ 2% ಹಣದಲ್ಲಿ ಅವರ ಕ್ಷೇತ್ರದಲ್ಲಿ development ಮಾಡುವುದನ್ನು ಮಾಡೋಣ. ಆದರೂ ಅವರು 2012–13 ರಲ್ಲಿ 140.23 ಲಕ್ಷ ರೂ. ಗಳನ್ನು ಖರ್ಚು ಮಾಡಿದ್ದಾರೆ. 2013–14 ರಲ್ಲಿ 114 ಲಕ್ಷ ರೂ.ಗಳನ್ನು ಖರ್ಚು ಮಾಡಿದ್ದಾರೆ. ಈ ವರ್ಷ ಕಾಯಿದೆ ಜಾರಿ ಬಂದಿರುವುದರಿಂದ profit ನಲ್ಲಿ 2% ಹಣ ಖರ್ಚು ಮಾಡಿಸಬೇಕೆಂದು ಇದೆ ಅದನ್ನು ಮಾಡಿಸುವುದಕ್ಕೆ ಪ್ರಯತ್ನ ಮಾಡಿಸುತ್ತೇವೆ.

ಡಾ ॥ ಉಮೇಶ್ ಜಿ. ಜಾಧವ್ : 5 ವರ್ಷದ action plan ಮಾಡಬೇಕು.

ಶ್ರೀ ಪ್ರಿಯಾಂಕ್ ಖರ್ಗೆ : ಕಂಪನಿಯ ನಿಯಮದ ಪ್ರಕಾರ 5 ವರ್ಷದ action plan ಮಾಡಬೇಕು.

ಅಧ್ಯಕ್ಷರು : ಈ ವರ್ಷದಿಂದ ಕಡ್ಡಾಯವಾಗಿದೆ. ಅವರು ಮಾಡುತ್ತಾರೆ ಬಿಡ.

ಶ್ರೀ ಪ್ರಿಯಾಂಕ್ ಖರ್ಗೆ : ನಾನು ಮೂರನೇ ಸಲ ಈ ಸದನಕ್ಕೆ ಮನವಿಯನ್ನು ಮಾಡಿಕೊಳ್ಳುತ್ತಿದ್ದೇನೆ. ದಯವಿಟ್ಟು ಮಾನ್ಯ ಮುಖ್ಯಮಂತ್ರಿಗಳು ಈ CSR ಬಗ್ಗೆ ವಿಶೇಷವಾಗಿ ಒಂದು House Committee ಅನ್ನು ರಚನೆ ಮಾಡಿ.

ಶ್ರೀ ಸಿದ್ದರಾಮಯ್ಯ : ಇದು ಈ ವರ್ಷ ಜಾರಿಗೆ ಬಂದಿದೆ.

ಅಧ್ಯಕ್ಷರು : ಇದನ್ನು ಈ ವರ್ಷ ಪ್ರಾರಂಭ ಮಾಡಿದ್ದಾರೆ.

ಶ್ರೀ ಪ್ರಿಯಾಂಕ ಖರ್ಗೆ : ತಮಗೆ ಒಂದು ಸಣ್ಣ ಉದಾಹರಣೆಯನ್ನು ಹೇಳುತ್ತೇನೆ.

ಅಧ್ಯಕ್ಷರು : ಉದಾಹರಣೆ ಬೇಡ. ಈ ವರ್ಷದಿಂದ ಕಡ್ಡಾಯವಾಗಿ ಮಾಡಿಸುತ್ತಾರೆ ಬಿಡಿ.

ಶ್ರೀ ಪ್ರಿಯಾಂಕ್ ಖರ್ಗೆ : ಅವರ ಆದಾಯದಲ್ಲಿ ಒಂದು ಕೋಟಿ ರೂ.ಗಳನ್ನು ಖರ್ಚು ಮಾಡಿದ್ದೇವೆಂದು ಇಲ್ಲಿ ಕೊಡುತ್ತಾರೆ. ಅಲ್ಲಿ on ground ಯಾವ ಕೆಲಸವೂ

ಆಗಿಲ್ಲ. ನನ್ನ ಕ್ಷೇತ್ರವು ಅಲ್ಲಿ ಬರುತ್ತದೆ. ಇದಕ್ಕೆ ಒಂದು ಸಮಿತಿ ರಚನೆ ಮಾಡಿದರೆ ನಾವು ಏನು ಮಾಡಬೇಕು ಏನು ಮಾಡಬಾರದು ಎನ್ನುವುದನ್ನು ಹೇಳುತ್ತೇವೆ.

ಶ್ರೀ ಸಿದ್ದರಾಮಯ್ಯ : ಮಾನ್ಯ ಅಧ್ಯಕ್ಷರೆ, ನಾನು ಈಗಾಗಲೇ ಸ್ಪಷ್ಟ ಪಡಿಸಿದ್ದೇನೆ. ಮೊದಲು ಕಡ್ಡಾಯ ಇರಲಿಲ್ಲ. ಈಗ ಆಕ್ಟ್ ಮಾಡಿ ಕಡ್ಡಾಯ ಎಂದು ಮಾಡಿದ್ದಾರೆ. 2014–15 ರಿಂದ ಜಾರಿಗೆ ಬಂದಿದೆ ಅವರು specific ಆಗಿ ಮಾಡಿದ್ದಾರೋ ಇಲ್ಲವೋ ಎನ್ನುವುದನ್ನು ನೋಡಿಕೊಂಡು ಅದನ್ನು enforce ಮಾಡಲಿಕ್ಕೆ ಕಾನೂನನ್ನು expose ಮಾಡಲಿಕ್ಕೆ ಪ್ರಯತ್ನ ಮಾಡುತ್ತೇವೆ.

ಅಧ್ಯಕ್ಷರು : OK ಮಾನ್ಯ ಮಲ್ಲಿಕಾರ್ಜುನ ಸಿದ್ರಾಮಪ್ಪ ಖೂಬಾ ನಿಮ್ಮ ಪ್ರಶ್ನೆಗೆ ಕಾಲಾವಕಾಶವನ್ನು ಕೇಳಿದ್ದಾರೆ. ಶ್ರೀ ಈಶ್ವರ್ ಭೀಮಣ್ಣ ಖಂಡ್ರೆ, ತಮ್ಮ ಪ್ರಶ್ನೆ ಬೇರೆಯವರಿಗೆ ವರ್ಗಾವಣೆ ಆಗಿದೆ. ಶ್ರೀ ಬಸವರಾಜ ರಾಯರೆಡ್ಡಿ ತಮ್ಮ ಪ್ರಶ್ನೆಗೆ ಕಾಲಾವಕಾಶವನ್ನು ಕೇಳಿದ್ದಾರೆ.

ಶ್ರೀ ಈಶ್ವರ್ ಭೀಮಣ್ಣ ಖಂಡ್ರೆ : ಮಾನ್ಯ ಅಧ್ಯಕ್ಷರೆ, ನನ್ನ ಪ್ರಶ್ನೆಗೆ ಉತ್ತರ ಬಂದಿಲ್ಲ.

ಅಧ್ಯಕ್ಷರು : ಅದು ಬೇರೆಯವರಿಗೆ ವರ್ಗಾವಣೆ ಆಗಿದೆ, ತಮಗೆ ಉತ್ತರ ಬರುತ್ತದೆ.

ಕಾಲುಬಾಯಿ ರೋಗದಿಂದ ಮೃತಪಟ್ಟ ಜಾನುವಾರುಗಳ ಮಾಲೀಕರಿಗೆ ಪರಿಹಾರ ನೀಡಿಕೆ

29 (248) ಶ್ರೀ ಚೆಲುವರಾಯಸ್ವಾಮಿ ಎನ್. (ನಾಗಮಂಗಲ) :– ಮಾನ್ಯ ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳು, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಹಾಗೂ ಪಶುಸಂಗೋಪನಾ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

(ಅ) ರಾಜ್ಯದಲ್ಲಿ ಕಳೆದ ವರ್ಷ ಕಾಲುಬಾಯಿ ಜ್ವರದಿಂದ ಮೃತಪಟ್ಟ ಜಾನುವಾರಗಳ ಸಂಖ್ಯೆ ಎಷ್ಟು; (ಜಿಲ್ಲಾವಾರು ವಿವರ ನೀಡುವುದು)

(ಆ) ಈ ಕಾಲುಬಾಯಿ ರೋಗವನ್ನು ಪರಿಣಾಮಕಾರಿಯಾಗಿ ತಡೆಯಲು ಸರ್ಕಾರ ಕೈಗೊಂಡಿರುವ ಕ್ರಮಗಳಾವುವು; (ರೋಗ ನಿರೋಧಕ ಚುಚ್ಚುಮದ್ದನ್ನು ನೀಡಿರುವ ಬಗ್ಗೆ ವಿವರಗಳನ್ನು ಜಿಲ್ಲಾವಾರು ಒದಗಿಸುವುದು)